ಅಳುಕಿ ಈ ನಿಟ್ಟಿನ ಹೆಜ್ಜೆ ಇರಿಸಿದ್ದಾಳೆ. ಅಥವಾ ಆಕೆಯೇ ತಿಳಿಸಿದಂತೆ ತಾನೇನು ಮಾಡುತ್ತಿದ್ದೇನೆಂಬ ಅರಿವೇ ಇಲ್ಲವೇನೋ!

'ಆಕೆ ತುಂಬಾ ವಿಚಲಿತಳಾಗಿದ್ದಾಳೆ. ಒಳಗಿನ ಘರ್ಷಣೆ ಈಗ ಸ್ಫೋಟಗೊಂಡಿದೆ. ಆಕೆ ಅಲ್ಲೇ ಇರಲಿ. ನೀವು ಆಸ್ಪತ್ರೆ ವಿಳಾಸ ನನಗೆ ಮೆಸೇಜ್ ಮಾಡಿ ಮತ್ತು ಡಾಕ್ಟರ್ ನಂಬರ್ ಕೂಡಾ. ನಾನು ಅಲ್ಲಿಗೆ ಒಬ್ರು ಸೈಕಿಯಾಟ್ರಿಸ್ಟ್ ಅನ್ನು ಕಳಿಸ್ತೀನಿ. ಅವ್ರು ಟ್ಯಾಬ್ಲೆಟ್ಸ್ ಕೊಡ್ತಾರೆ. ಆಕೆಯ ಮನಸ್ಸು ತಹಬಂದಿಗೆ ಬರುತ್ತೆ. ಆಕೆಗೆ ಈಗ ಬರುವ ಡಾಕ್ಟರ್ ಸೈಕಿಯಾಟ್ರಿಸ್ಟ್ ಅಂತ ತಿಳಿಯುವುದು ಬೇಡ. ಓಕೆನಾ?' ಎಂದರು.

ಪ್ರದೀಪ ಒಪ್ಪಿ ವಿಳಾಸ ಮತ್ತು ಆಕೆಯನ್ನು ಪರಿಶೀಲಿಸುತ್ತಿದ್ದ ವೈದ್ಯರ ಸಂಖ್ಯೆ ಕಳಿಸಿದ. ಡಾ. ರೂಪಾರೇ ಆ ವೈದ್ಯರಿಗೆ ಕರೆ ಮಾಡಿ ನಿವೇದಿತಾಳ ಮಾನಸಿಕ ಸ್ಥಿತಿ ತಿಳಿಸಿದಳು. ಈ ರೀತಿ ಅನಾಹುತ ಮಾಡಿಕೊಂಡಿರುವ ಹಿನ್ನೆಲೆಯೂ ವಿವರಿಸಿ ಆಕೆ ಒಬ್ಬ ಸೈಕಿಯಾಟ್ರಿಸ್ಟ್ ಅನ್ನು ನೇಮಿಸಿ ಅಲ್ಲಿಗೆ ಕಳಿಸುವ ವಿಚಾರಕ್ಕೆ ಒಪ್ಪಿಗೆ ಪಡೆದು ನಂತರ ಕಳಿಸಿದಳು. ಆತ ಬಂದು ನಿವಿಯನ್ನು ಪರಿಶೀಲಿಸಿದರು. ಸಹಜವಾಗಿ ಮಾತನಾಡಿಸಿ ಅವಳ ಮನಸ್ಥಿತಿ ಅರಿತುಕೊಂಡರು. ಆಕೆ ನೀಡಿದ ಪ್ರತಿಕ್ರಿಯೆಯ ಅನುಸಾರ ಅವರು ಮಾತ್ರೆಗಳನ್ನು ಬರೆದುಕೊಟ್ಟಿದ್ದರು.

'ಇದು ಅವರ ಪ್ಯಾನಿಕ್ ಅಟ್ಯಾಕ್ ಮತ್ತು ಆ್ಯಂಗ್ಸೈಟಿಗೆ ಕೆಲವು ಮಾತ್ರೆಗಳು.'

ನಿವಿಗೆ ಆತ ಮಾನಸಿಕ ವೈದ್ಯರೆಂಬ ಸುಳಿವೇ ಸಿಗದಷ್ಟು ಇದೆಲ್ಲವೂ ಸಹಜವಾಗಿ ನಡೆದುಹೋಯಿತು. ಪ್ರಭಾವತಿಯೇ ಆಕೆಯ ಬಳಿ ನಿಂತು ಅವೆಲ್ಲವನ್ನೂ ನೀಡುವ ಜವಾಬ್ದಾರಿ ಹೊತ್ತುಕೊಂಡಳು. ನಿಧಿಯನ್ನೂ ಜತನ ಮಾಡಿದಾಗ ಆಕೆಯ ಮಹತ್ವ ಈಗ ಪ್ರದೀಪನಿಗೆ ಅರಿವಾಗಿತ್ತು.

'ತುಂಬಾ ಥ್ಯಾಂಕ್ಸ್ ಅಕ್ಕಾ. ನೀವಿರುವ ಕಾರಣ ನನಗೆ ದೊಡ್ಡ ಆಧಾರವಾಗಿದೆ' ಎಂದ.

'ಏನಣ್ಣಾ ಹೀಗೆ ಹೇಳ್ತೀರಾ? ನೀವು ನಮಗೆ ಸಂಬಳ ಕೊಡುತ್ತೀರಿ. ಅದಕ್ಕೂ ಹೆಚ್ಚಾಗಿ ನಾನೂ ನಿಮ್ಮವಳೆಂಬಂತೇ ಗೌರವ ಕೊಡುತ್ತೀರಿ. ಅಷ್ಟು ಸಾಕು ನನಗೆ' ಎಂದಳು ಕೃತಜ್ಞತಾಪೂರ್ವಕವಾಗಿ.

'ಸಂಬಳ ನೀಡಿದರೂ ನಿಷ್ಠೆ ಸಿಗುವುದು ಕಮ್ಮಿ ಈಗಿನ ಕಾಲಕ್ಕೆ. ಆದರೆ ನೀವು ಹಾಗಲ್ಲ' ಎಂದ. ಪ್ರಭಾವತಿ ನಿಜಕ್ಕೂ ಮನೆ ಸದಸ್ಯೆಯಂತೆ ನಿಧಿಯನ್ನೂ, ನಿವಿಯನ್ನೂ ಕಾಳಜಿ ಮಾಡಿದಳು. ಮದ್ದಿನ ಪರಿಣಾಮಕ್ಕೋ, ವಾತಾವರಣದ ಅಗತ್ಯತೆಯೋ, ಅಂತೂ ನಿವಿ ಹೆಚ್ಚು ನಿದ್ದೆಯ ಅಮಲಿನಲ್ಲಿದ್ದು, ಎಚ್ಚರಗೊಂಡಾಗಲೂ ಶಾಂತವಾಗಿದ್ದಳು. ಎಲ್ಲದಕ್ಕೂ ಮೌನವಾಗಿ ಸ್ಪಂದಿಸುತ್ತಿದ್ದಳು. ಹೆಚ್ಚು ತಕರಾರು ತೆಗೆಯುತ್ತಿರಲಿಲ್ಲ. ಮರುದಿನ ವೈದ್ಯರು ಮನೆಗೆ ಹೋಗುವ ಅನುಮತಿ ನೀಡಿದರು.

ನಿವಿ ಮನೆಗೆ ಮರಳಿ ಮೂರು ದಿನಗಳು ಕಳೆದಿತ್ತು. ಪ್ರದೀಪ ಅವಳಿಗೆ ಮತ್ತೆ ಡಾ. ರೂಪಾರ ಬಳಿ ಸೆಷನ್‌ಗೆ ಹೋಗುವಂತೆ ಅರುಹಿದಾಗ ಈ ಸಲ ಅವಳು ಪ್ರತಿಭಟಿಸಲಿಲ್ಲ.

'ನಾನು ಈಗಾಗಲೇ ನನ್ನ ಸೆಷನ್ ಮುಗಿಸಿದೆ. ಈಗ ನಿನ್ನ ಸರದಿ' ಎಂದ. ಸುಳ್ಳು ಹೇಳುವಾಗ ಅವನಿಗೆ ಆಕೆಯ ಕಣ್ಣುಗಳನ್ನು ನೈತಿಕವಾಗಿ ಎದುರಿಸಲಾಗಿರಲಿಲ್ಲ. ಅವಳ ಒಳಿತಿಗಾಗಿ ಇದನ್ನು ಮಾಡಲೇ ಬೇಕಿತ್ತು. ಮನದಲ್ಲೇ ಅವಳ ಕ್ಷಮೆ ಯಾಚಿಸಿದ.

ಡಾ. ರೂಪಾ ತಿಳಿಸಿದ ದಿನಕ್ಕೆ ನಿವೇದಿತಾ ಆಕೆಯ ಸಮ್ಮುಖದಲ್ಲಿದ್ದಳು. ಅವಳ ಮುಖ ಮುದ್ರೆ ಶಾಂತವಾಗಿತ್ತು. ತನ್ನನ್ನೇ ಶರಣಾಗತಿಯಿಂದ ಒಪ್ಪಿಸಿಕೊಳ್ಳುವಂತೆ ಬಂದಿದ್ದಳು. ಪ್ರದೀಪ ಆಕೆಯನ್ನು ಬಿಟ್ಟು ಹೊರಡುವಾಗ ತುಸು ಕಳವಳ ಹೊಂದಿದ್ದ.

'ನೀವು ಚಿಂತೆ ಮಾಡಬೇಡಿ. ಐ ವಿಲ್ ಟೇಕ್ ಕೇರ್ ಆಫ್ ಹರ್' ಎಂದು ಡಾ. ರೂಪಾ ಆಶ್ವಾಸನೆ ತುಂಬಿ ಕಳಿಸಿದರು. ಅವನು ಸಣ್ಣ ದಿಗಿಲಿನಿಂದಲೇ ಅಲ್ಲಿಂದ ಹೊರಟಿದ್ದ. ಮನಸ್ಸೆಲ್ಲಾ ಇತ್ತಲೇ ಇತ್ತು.

* * *

ಡಾ. ರೂಪಾ, ನಿವಿಯನ್ನು ಒಳ ಕೋಣೆಗೆ ಕರೆದೊಯ್ದು ಅಲ್ಲಿ ಅರ್ಧ ಕುಳಿತು, ಅರ್ಧ ಮಲಗುವಂತಿದ್ದ ಕುರ್ಚಿಯತ್ತ ಕೈ ತೋರಿಸಿ ಕುಳಿತುಕೊಳ್ಳುವಂತೆ ತಿಳಿಸಿದರು. ನಿವೇದಿತಾ ಅದರಲ್ಲಿ ಆರಾಮವಾಗಿ ಮೈ ಚೆಲ್ಲಿಕೊಂಡು ಕುಳಿತಳು. ಆ ಕೋಣೆಯಲ್ಲಿ ಮಂದ ಬೆಳಕಿತ್ತು. ನಿವೇದಿತಾಳ ಪಕ್ಕದ ಕುರ್ಚಿಯಲ್ಲಿ ಡಾ. ರೂಪಾ ಆಸೀನರಾದರು.

'ನೋಡು ನಿವಿ. ನಾನಿಲ್ಲೇ ಇದ್ದೇನೆ. ನಿನ್ನ ಬಳಿ. ನಿನ್ನ ಜೊತೆ ನಾನಿದ್ದೇನೆ. ಇಲ್ಲಿ ಏನು ನಡೆದರೂ ಅದು ನಮ್ಮಿಬ್ಬರ ಮಧ್ಯೆಯೇ ಇರುತ್ತದೆ. ಭರವಸೆ ಇಡು, ಆಯ್ತಾ? ಹೆದರಬೇಕಾದ ಅಗತ್ಯವೇ ಇಲ್ಲ' ಎಂದು ಆಕೆಗೆ ಭದ್ರತೆಯ ಭಾವನೆ ಒದಗಿಸುವ ಮೂಲಕ ತಮ್ಮ ಪ್ರಕ್ರಿಯೆಯನ್ನು ಆರಂಭಿಸಿದರು.

'ಎಲ್ಲಿ ದೀರ್ಘವಾಗಿ ಉಸಿರಾಡು. ನಾನು ತಿಳಿಸಿದಂತೆ ನೀನು ನಡೆದುಕೊಳ್ಳುತ್ತಾ ಹೋಗಬೇಕು, ಆಯ್ತಾ? ನಿನ್ನ ಕಣ್ಣುಗಳನ್ನು ಈಗ ಮುಚ್ಚುತ್ತೀಯಾ ಮತ್ತು ನಿನ್ನ ಮನಸ್ಸು ನೀನು ತೆಗೆದುಕೊಳ್ಳುವ ಉಸಿರಾಟದ ಮೇಲೆ ಕೇಂದ್ರೀಕೃತವಾಗಲಿ. ನಾನು ಹೇಳಿದಂತೆ ನೀನು ಕೇಳುತ್ತೀಯಾ.'

ನಿವೇದಿತಾ ನಿಧಾನವಾಗಿ ತನ್ನ ಕಣ್ಣುಗಳನ್ನು ಮುಚ್ಚಿಕೊಂಡಳು. ಅವಳ ಮನಸ್ಸು ಡಾ. ರೂಪಾರ ಆದೇಶಗಳನ್ನು ಪಾಲಿಸಲು ಸನ್ನದ್ಧವಾಗಿತ್ತು.

'ಉಸಿರನ್ನು ದೀರ್ಘವಾಗಿ ಎಳೆದುಕೊಳ್ಳಬೇಕು. ನಂತರ ಬಿಡಬೇಕು. ನೀಳವಾಗಿ ಉಸಿರೆಳೆದುಕೋ. ನಂತರ ಬಿಡು. ಪ್ರತಿ ಸಲ ಹೀಗೆ ಮಾಡಿದಾಗ ನಿನ್ನ ಮನಸ್ಸು ಮತ್ತು ದೇಹ ಹಗುರವಾದಂಥ ಅನುಭವವಾಗುತ್ತದೆ ನಿನಗೆ. ಉಸಿರಾಟ, ಆರಾಮ'.

ನಿವಿ ಮೆಲ್ಲನೆ ಆಕೆಯ ಮಾತಿಗೆ ಸ್ಪಂದಿಸುತ್ತಾ ಆಕೆಯ ನಿರ್ದೇಶನಗಳನ್ನು ಕೀಲಿ ಕೊಟ್ಟ ಗೊಂಬೆಯಂತೆ ಪಾಲಿಸತೊಡಗಿದಳು.

'ಒಂದು, ಎರಡು, ಮೂರು.. ನಾಲ್ಕು. ರಿಲ್ಯಾಕ್ಸ್ ರಿಲ್ಯಾಕ್ಸ್' ಸುಮಾರು ಹನ್ನೆರಡು ಬಾರಿ ಈ ರೀತಿಯ ದೀರ್ಘ ಉಚ್ಛ್ವಾಸ ಮತ್ತು ನಿಶ್ವಾಸ ಕ್ರಮಗಳನ್ನು ಅನುಸರಿಸಿದ ನಂತರ ನಿವಿಯ ದೇಹ ಮತ್ತು ಮನಸ್ಸು ಎರಡೂ ಸ್ವಾಧೀನ ಮರೆಯುವಷ್ಟು ಹಗುರವಾಗಿತ್ತು.

'ಈಗ ನಿನ್ನ ಮೈ ಮನಸ್ಸು ಹಗುರವಾಗಿದೆ. ನನ್ನ ಮಾತುಗಳಿಗೆ ನೀನು ಸ್ಪಂದಿಸಲು ಶುರು ಮಾಡಿದ್ದೀಯಾ. ನೀನು ನನ್ನ ಪ್ರಶ್ನೆಗಳಿಗೆ ಉತ್ತರಿಸುತ್ತೀಯಲ್ಲಾ.'

ಆಕೆಯ ಮೈ ಹಗುರವಾಗಿದ್ದರ ಪ್ರತೀಕವೆಂಬಂತೆ ಆಕೆಯ ಗಲ್ಲ ಜೋತು ಬಿದ್ದಂತಾಗಿತ್ತು. ಮೈ ಬಿಗಿಯಾಗಿರದೆ ಕೈ ಕಾಲುಗಳು ಬಲ ಕಳೆದುಕೊಂಡಂತೆ ಹಗುರವಾಗಿ ಇಳಿಬಿಟ್ಟಂತಾಗಿದ್ದವು.

'ನಿನಗೆ ಕಾಡು ಇಷ್ಟವಾ?'

'ಹೌದು'.

ಆಗ ಅವರು ಸಣ್ಣಗೆ ಒಂದು ಸಂಗೀತದ ತುಣುಕನ್ನು ಪ್ಲೇ ಮಾಡಿದರು. ಅದು ಕಾಡಿನ ವಾತಾವರಣವನ್ನು ಕಟ್ಟಿಕೊಡುವ ಶಬ್ದ. 'ನಿನಗೆ ಈ ಮೆಲು ಸಂಗೀತ ಕೇಳಿಸುತ್ತಿದೆಯಾ? ಗಾಳಿ ಬೀಸುವ ಶಬ್ದ. ಹಕ್ಕಿಗಳ ಚಿಲಿಪಿಲಿ ಶಬ್ದ. ನೀನು ಮೆಲ್ಲನೆ ಅಲ್ಲಿ ಕಾಡಿನ ಮಧ್ಯೆ ನಡೆದುಕೊಂಡು ಹೋಗುತ್ತಿದ್ದೀಯಾ, ಅಲ್ವಾ?'

ಆಕೆಯ ದನಿಯಲ್ಲಿನ ವಿಶಿಷ್ಟ ಮಾಂತ್ರಿಕತೆಯ ಮೋಡಿಗೆ ಮಾರು ಹೋದಂತೆ ನಿವೇದಿತಾ ಮೆಲ್ಲನೆ ಆ ವಾತಾವರಣಕ್ಕೆ ತನ್ನನ್ನು ಹೊಂದಿಸಿಕೊಂಡು ಉನ್ಮಾದದ ದನಿ ಹೊರಡಿಸಿದಳು.

'ಹ್ಞೂಂ'

'ನಿನ್ನ ಕಾಲ ಕೆಳಗೆ ಎಲೆಗಳ ಸಪ್ಪಳ ಕೇಳ್ತಾ ಇದ್ದೀಯಾ?'

'ಹ್ಞೂಂ'

'ನೀನು ಮೆಲ್ಲಗೆ ನಡೆದು ಬರುತ್ತಿದ್ದೀಯಾ. ಹಾಗೆ ನಡೆಯುತ್ತ ನಡೆಯುತ್ತಾ ತುಂಬಾ ದೂರ ಬಂದಿದ್ದೀಯಾ. ಅಲ್ಲಿ ನೀನು ಒಂಟಿ. ನಿನ್ನ ಜೊತೆ ಯಾರೂ ಇಲ್ಲ. ನೀನು ಮತ್ತು ಕೇವಲ ನೀನು ಮಾತ್ರ ಒಬ್ಬಳೇ.'

'ಹ್ಞೂಂ'

'ಈಗ ಸ್ವಲ್ಪ ದೂರ ನಡೆದು ಬಂದ ನಂತರ ನಿನಗೆ ಕೆಳಗೆ ಮೆಟ್ಟಿಲುಗಳು ಕಾಣಿಸುತ್ತದೆ. ಕಾಣಿಸ್ತಿದ್ಯಾ? ಅಲ್ಲಿ ಅರವತ್ತು ಮೆಟ್ಟಿಲುಗಳಿವೆ. ಅದು ನಿನ್ನನ್ನು ಕೆಳಗೆ, ತುಂಬಾ ಕೆಳಗೆ ಕರೆದೊಯ್ಯುತ್ತದೆ. ಮನಸ್ಸಿನ ಆಳಕ್ಕೆ. ಸರೀನಾ? ಈಗ ನೀನು ಒಂದೊಂದೇ ಮೆಟ್ಟಿಲುಗಳನ್ನು ಇಳಿಯಲು ಶುರು ಮಾಡುತ್ತೀಯಾ. ಅರವತ್ತು, ಐವತ್ತೊಂಬತ್ತು, ಐವತ್ತೆಂಟು.'

ನಿವಿ ತನ್ನನ್ನು ತಾನು ಆಕೆಗೆ ಒಪ್ಪಿಸಿ ತಾನೇ ಅಲ್ಲವೆನ್ನುವಂತೆ ಕುಳಿತಿದ್ದಳು. ಡಾ. ರೂಪಾ ತಮ್ಮ ವಿಶಿಷ್ಟ ದನಿಯಲ್ಲಿ ಆಕೆಯ ಸುಪ್ತ ಮನಸ್ಸಿನ ಮೇಲೆ ತಮ್ಮ ಹಿಡಿತವನ್ನು ಸಾಧಿಸಿ, ನಿರ್ದೇಶನಗಳನ್ನು ನೀಡಲಾರಂಭಿಸಿದ್ದರು.

'ಈಗ ಮೇಲಿನಿಂದ ಕೆಳಮುಖವಾಗಿ ಇಪ್ಪತ್ತು ಮೆಟ್ಟಿಲುಗಳನ್ನು ಇಳಿದೆ. ನೀನೀಗ ಮೊದಲ ಹಂತಕ್ಕೆ ತಲುಪಿದ್ದೀಯಾ. ಅಂದರೆ ಇದು ಕೆಳಗಿನಿಂದ ನಲವತ್ತನೇ ಮೆಟ್ಟಿಲಲ್ಲಿ ನಿಂತಿದ್ದೀಯಾ. ಇಲ್ಲಿ ನಾನು ನಿನ್ನ ಬಳಿ ಕೆಲವು ಪ್ರಶ್ನೆಗಳನ್ನು ಕೇಳುತ್ತೇನೆ. ನೀನು ಉತ್ತರ ಕೊಡಬೇಕು. ಸರೀನಾ?'